ಫ್ಯಾಕ್ಸ್: 08282–256262
ಇ–ಮೇಲ್:drsyndicateku@gmail.com

☎08282–256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ– 577 451

ಸಂಖ್ಯೆ: ಕುವಿ:ಯುಎಟಿ–I: 380 :2023–24

ದಿನಾಂಕ:31–10–2023
06/11

## ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭಾ ಸೂಚನಾ ಪತ್ರ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ರ ಪ್ರಕರಣ–30ರ ಮೇರೆಗೆ ಹಾಗೂ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಪರಿನಿಯಮಗಳು ಅಧ್ಯಾಯ–II ರ ಪ್ರಕರಣ–6 ರನ್ವಯ ಹಾಗೂ ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ವಿಶ್ವವಿದ್ಯಾಲಯದ *"ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯನ್ನು ದಿನಾಂಕ:22–11–2023ರ ಬುಧವಾರ ಪೂರ್ವಾಹ್ನ : 11.00 ಗಂಟೆಗೆ ವಿಶ್ವವಿದ್ಯಾಲಯದ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"ದಲ್ಲಿ ಏರ್ಪಡಿಸಲಾಗಿದೆ.* ಈ ಸಭೆಗೆ ತಾವು ಹಾಜರಾಗಲು ಕೋರಲಾಗಿದೆ.

### ಸಭೆಯ ಕಾಲಾನುಕ್ರಮ ಪಟ್ಟಿ

| | | |
|---|---|---|
| 01. | ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಪರಿನಿಯಮಗಳು–ಅಧ್ಯಾಯ–II ರ ಪ್ರಕರಣ–9 ರಂತೆ ಸದಸ್ಯರಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | 15–11–2023 ಬುಧವಾರ |
| 02. | ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮಗಳು–ಅಧ್ಯಾಯ–II ರ ಪ್ರಕರಣ–14 ರಂತೆ ಕಾರ್ಯಸೂಚಿ ರವಾನಿಸುವ ದಿನಾಂಕ | 17–11–2023 ಶುಕ್ರವಾರ |

ಸದಸ್ಯರು ಕಳುಹಿಸಲಿಚ್ಛಿಸುವ ಪ್ರಸ್ತಾವನೆಗಳು ಅಥವಾ ಹಿಂದಿನ ಸಭೆಯ ನಿರ್ಣಯಗಳಿಗೆ ತಿದ್ದುಪಡಿಗಳಿದ್ದಲ್ಲಿ ಅವುಗಳನ್ನು ಕಳುಹಿಸುವಾಗ ಲಕೋಟೆಯ ಮೇಲೆ ಸ್ಪಷ್ಟವಾಗಿ ***"ದಿನಾಂಕ:22–11–2023 ರಂದು ನಡೆಯುವ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ಪ್ರಸ್ತಾವನೆಗಳು"*** ಎಂದು ನಮೂದಿಸಿ ಹಾಗೂ ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ.

ಪ್ರಸ್ತಾವನೆಗಳನ್ನು ***"ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451"*** ಇವರಿಗೆ ದಿನಾಂಕ:15–11–2023 **ರೊಳಗಾಗಿ ತಲುಪುವಂತೆ ಕಳುಹಿಸಲು ಕೋರಿದೆ.**

ವಿ.ಸೂ:
1. ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಪರಿನಿಯಮಗಳು – ಅಧ್ಯಾಯ–II ರ ಪ್ರಕರಣ– 8 ರ ಪ್ರಕಾರ ಸದಸ್ಯರುಗಳು ಗರಿಷ್ಟ ಎರಡು (02) ಪ್ರಸ್ತಾವನೆಗಳನ್ನು ಮಾತ್ರ ಕಳುಹಿಸಲು ಅವಕಾಶವಿದೆ.
2. ಪ್ರತಿ ಪ್ರಸ್ತಾವನೆಯ ಎಲ್ಲಾ ಸಾರಾಂಶವನ್ನು ಒಳಗೊಂಡಂತೆ ಕನಿಷ್ಟ ಎರಡು ಗರಿಷ್ಟ ನಾಲ್ಕು ಸಾಲುಗಳಿಗೆ ಮೀರದಂತೆ ಕಳುಹಿಸುವಂತೆ ಕೋರಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ವಯಸ್ಕರ ಮುಂದುವರಿದ ಶಿಕ್ಷಣ ಮತ್ತು ವಿಸ್ತರಣೆ ವಿಭಾಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ/ಐ.ಕ್ಯೂ.ಎ.ಸಿ/ಮಹಿಳಾ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು
10) ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು / ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು–***ಯಾವುದೇ ಪ್ರಸ್ತಾವನೆಗಳನ್ನು ದಿನಾಂಕ:15–11–2023 ರ ಒಳಗಾಗಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಪ್ರಾಧಿಕಾರಗಳ ವಿಭಾಗಕ್ಕೆ ಎ4 ಅಳತೆಯಲ್ಲಿ ತಲಾ 60 ಪ್ರತಿಗಳನ್ನು ತಲುಪಿಸಬೇಕು. ಯಾವುದೇ ಟೇಬಲ್ ಅಜೆಂಡಾಗಳಿಗೆ ಅವಕಾಶವಿರುವುದಿಲ್ಲ.***
11) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು/ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.
12) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.